### ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕೆಲಸ ಗಿಟ್ಟಿಸುವ ಕಾರ್ಯಾನುಭವ ಪತ್ರಕ್ಕೆ ಕನ್ನಡಿ ಹಿಡಿಯಲಿದೆ ಹೊಸ ಸಂಸ್ಥೆ

# ಬೋಗಸ್ 'ಪ್ರಮಾಣ'; ರಿಝೋರ್ಸ್ ಕಡಿವಾಣ

■ ರಾಜೀವ ಹೆಗಡೆ
ಕ.ಪ್ರ.ವಾರ್ತೆ | ಬೆಂಗಳೂರು | ಸೆ.23

■ ಅಭ್ಯರ್ಥಿ ಹಿಂದೆ ಕೆಲಸ ಮಾಡಿದ ಕಂಪನಿ ಪೂರ್ವಾಪರಗಳನ್ನು ಕೇವಲ 8 ಗಂಟೆಗಳಲ್ಲಿ ನೀಡಲಿದೆ ರಿಝೋರ್ಸ್

■ ಪ್ರಮಾಣಪತ್ರದಲ್ಲಿನ ಕಂಪನಿ ಹೆಸರು ಇಮೇಲ್ ಮಾಡಿದರೆ ಸಾಕು; ಈ ಕೆಲಸಕ್ಕೆ ನಯಾ ಪೈಸೆ ಪಾವತಿಸಬೇಕಿಲ್ಲ

ಬೋಗಸ್ ಪ್ರಮಾಣಪತ್ರ ನೀಡಿದರೆ ಕೆಲಸವಿಲ್ಲದೇ ಬೀದಿಪಾಲಾಗಬಹುದು ಹುಷಾರ್! ದೇಶದ ಯಾವುದೋ ಮೂಲೆಯಲ್ಲಿರುವ ಕಂಪನಿ ಹೆಸರಲ್ಲಿ ಬೋಗಸ್ ಕಾರ್ಯಾನುಭವದ ಪ್ರಮಾಣಪತ್ರ ಖರೀದಿಸಿ ಉತ್ತಮ ಸಂಸ್ಥೆಗಳಲ್ಲಿ ಕೆಲಸ ಗಿಟ್ಟಿಸುವ ವ್ಯವಸ್ಥಿತ ದಂಧೆ ಜಾರಿಯಲ್ಲಿದೆ. ಇಂತಹ ದಂಧಾಕೋರರನ್ನು ನಿಯಂತ್ರಿಸುವ ಸಲುವಾಗಿ 'ರಿಝೋರ್ಸ್' ಎಂಬ ಸಂಸ್ಥೆ ಹುಟ್ಟುಹಾಕಲಾಗಿದೆ.

ಹಣ ನೀಡಿ ಕಾರ್ಯಾನುಭವ ಪ್ರಮಾಣಪತ್ರಗಳನ್ನು ಪಡೆದು ನಂತರ ಕೈಸುಟ್ಟುಕೊಳ್ಳಬೇಕಾಗಬಹುದು. ಅತ್ತ ಕಡೆ ಕೆಲಸವೂ ಇಲ್ಲ, ಇತ್ತ ಕಡೆ ಪ್ರಮಾಣಪತ್ರಕ್ಕೆ ನೀಡಿದ ಹಣವೂ ಹಾಳಾಗಬಹುದು. ಭಾರತದಲ್ಲಿನ ಖಾಸಗಿ ಉದ್ಯಮಗಳ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರ ಪ್ರಕಾರ ಶೇ.10–15ರಷ್ಟು ಅಭ್ಯರ್ಥಿಗಳು ಬೋಗಸ್ ಪ್ರಮಾಣಪತ್ರದೊಂದಿಗೆ ಸಂದರ್ಶನಕ್ಕೆ ಹಾಜರಾಗುತ್ತಾರೆ. ಭಾರತದಲ್ಲಿನ ಸಂಸ್ಥೆಗಳಿಗೂ ಇದೊಂದು ದೊಡ್ಡ ಸವಾಲಾಗಿ ಪರಿಣಮಿಸಿದ್ದಲ್ಲದೇ ವಿದೇಶದಲ್ಲಿ ಭಾರತದ ಮಾನ ಹರಾಜಾಗುತ್ತಿದೆ. ಅದರಲ್ಲೂ ಬೆಂಗಳೂರಿಗೆ ಕೆಲಸ ಹುಡುಕಿಕೊಂಡು ಬರುವ ಯುವಕರು ಆಂಧ್ರಪ್ರದೇಶ, ಬಿಹಾರ್ ಹಾಗೂ ಉತ್ತರಪ್ರದೇಶದ ಸಂಸ್ಥೆಗಳಿಂದ ಸುಳ್ಳು ಪ್ರಮಾಣಪತ್ರ ತರುತ್ತಿದ್ದಾರೆ. ಇಂತಹ ಬೋಗಸ್ ಕಂಪನಿಗಳ ನಿಯಂತ್ರಣಕ್ಕೆ ಸರ್ಕಾರ ಮಟ್ಟದಲ್ಲಿ ಯಾವುದೇ ಕೆಲಸವಾಗಿಲ್ಲ.

**ಕೆಲಸವಿಲ್ಲದೇ ಅನುಭವವಿಲ್ಲ, ಅನುಭವವಿಲ್ಲದೇ ಕೆಲಸವಿಲ್ಲ!:** ಬೋಗಸ್ ಕಂಪನಿಗಳಿಂದ ಕಾರ್ಯಾನುಭವ ಪ್ರಮಾಣಪತ್ರ ಗಿಟ್ಟಿಸಿ ದೊಡ್ಡ ಸಂಸ್ಥೆಗಳಲ್ಲಿ ಕೆಲಸ ಪಡೆಯುತ್ತಿರುವುದು ಭಾರತಕ್ಕೆ ಹೊಸತಲ್ಲ. ಆದರೆ 2009 ಆರ್ಥಿಕ ಮಹಾಕುಸಿತದ ಬಳಿಕ ನೇಮಕ ಪ್ರಕ್ರಿಯೆಯಲ್ಲಿ ತೀವ್ರ ಇಳಿಕೆಯಾಯಿತು. ಆ ಬಳಿಕ ಇಂತಹ ಬೋಗಸ್ ಕಂಪನಿಗಳ ಸಂಖ್ಯೆ ಮತ್ತಷ್ಟು ಹೆಚ್ಚಾಯಿತು. ಒಂದೆಡೆ ನೇಮಕ ಪ್ರಕ್ರಿಯೆಯಲ್ಲಿ ಇಳಿಕೆಯಾಯಿತು. ಮತ್ತೊಂದೆಡೆ ಕಂಪನಿಗಳು ಕೂಡ ಅನುಭವಸ್ಥ ಹಿನ್ನೆಲೆ ಹುಡುಕಾಟದಲ್ಲಿದ್ದರು. ಹೊಸಬರನ್ನು ನೇಮಿಸಿ ತರಬೇತಿ ನೀಡುವ ಉತ್ಸಾಹದಲ್ಲಿ ಅವರಿರಲಿಲ್ಲ.

ಹೊಟ್ಟೆಪಾಡಿನ ಕೆಲಸಕ್ಕಾಗಿ ಏಜೆಂಟ್‌ಗಳ ಮೂಲಕ ಇಂತಹ ಬೋಗಸ್ ಕಂಪನಿಗಳ ಸಹವಾಸವನ್ನು ನಿರುದ್ಯೋಗಿಗಳು ಮಾಡಲಾರಂಭಿಸಿದರು. ಕೆಲ ವ್ಯವಸ್ಥಿತ ಸಂಘಟನೆಗಳು ಇಂತಹ ಹತ್ತಾರು ಕಂಪನಿಗಳನ್ನು ಹುಟ್ಟುಹಾಕಿವೆ. ಇವೆಲ್ಲ ಕಂಪನಿಗಳು ಸ್ವಂತ ವೆಬ್‌ಸೈಟ್, ದೂರವಾಣಿ ಸಂಖ್ಯೆ ಹೊಂದಿರುತ್ತವೆ. ಆದರೆ ಮಾಲೀಕತ್ವದ ವಿವರ ಹಾಗೂ ನೋಂದಣಿ ಗುರುತಿನ ಸಂಖ್ಯೆಗಳಿರುವುದಿಲ್ಲ. ಕೆಲಸ ಗಿಟ್ಟಿಸುವ ಭರದಲ್ಲಿ ಉದ್ಯೋಗ ಆಕಾಂಕ್ಷಿಗಳು ಇದ್ಯಾವುದನ್ನೂ ಪರಿಗಣಿಸದೇ ಏಜೆಂಟ್‌ರಿಗೆ ಹಣ ನೀಡಿ ಪ್ರಮಾಣಪತ್ರ ಪಡೆಯುತ್ತಾರೆ.

**ಸುಳ್ಳು ಕಂಪನಿಗಳನ್ನು ಪತ್ತೆ ಮಾಡುವ ರಿಝೋರ್ಸ್:** ಯಾವುದೇ ಸಂಸ್ಥೆಗೆ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿ ಪ್ರಾಥಮಿಕ ಪರೀಕ್ಷೆ ಪೂರ್ಣಗೊಂಡ ಬಳಿಕ ಸಂದರ್ಶನಕ್ಕೆ ಕರೆಯುತ್ತಾರೆ. ಆದರೆ ಬಹುತೇಕ ಕಂಪನಿಗಳು ಸಂದರ್ಶನ ಪೂರ್ಣಗೊಂಡ ಬಳಿಕ ನೇಮಕ ಪ್ರಕ್ರಿಯೆ ಹಂತದಲ್ಲಿ ಕಾರ್ಯಾನುಭವ ಪ್ರಮಾಣಪತ್ರಗಳನ್ನು ಪರಿಶೀಲನೆ ಮಾಡುತ್ತವೆ. ಆದರೆ ಬಹುತೇಕ ಸಂದರ್ಭದಲ್ಲಿ ಖ್ಯಾತ ಕಂಪನಿಗಳಲ್ಲಿ ಕೆಲಸಮಾಡಿದವರ ಪ್ರಮಾಣಪತ್ರಗಳನ್ನು ಮಾತ್ರ ಪರಿಶೀಲಿಸಲು ಸಾಧ್ಯವಾಗುತ್ತದೆ. ಇಲ್ಲವಾದಲ್ಲಿ ಅಭ್ಯರ್ಥಿಗಳು ಪ್ರಮಾಣಪತ್ರದಲ್ಲಿ ನೀಡಿದ ವಿಳಾಸವನ್ನೇ ನಂಬಿ ಕೂರಬೇಕಾಗುತ್ತದೆ. ಆ ಕಂಪನಿಗೆ ಕರೆ ಮಾಡಿ ವಿಚಾರಿಸಿದರೆ ಅರ್ಧಗಂಟೆಯಲ್ಲಿ ಖಾತ್ರಿಪಡಿಸಿ ಮಾಹಿತಿ ನೀಡುತ್ತಾರೆ. ಈ ಬೋಗಸ್ ಕಂಪನಿಗಳ ನೆಟ್‌ವರ್ಕ್ ಅಷ್ಟು ಅದ್ಭುತವಾಗಿರುತ್ತದೆ.

ನಿಮ್ಮ ಸಂಸ್ಥೆಗೆ ಕೆಲಸಕ್ಕೆಂದು ಬರುವ ಯಾವುದೇ ಅಭ್ಯರ್ಥಿ ಈ ಹಿಂದೆ ಕೆಲಸ ಮಾಡಿರುವ ಸಂಸ್ಥೆಯ ಪೂರ್ವಾಪರವನ್ನು ಕೇವಲ 8 ಗಂಟೆಯೊಳಗೆ ರಿಝೋರ್ಸ್ ವೆಬ್‌ಸೈಟ್ ನೀಡಲಿದೆ. ಪ್ರಮಾಣಪತ್ರದಲ್ಲಿ ದಾಖಲಾಗಿರುವ ಕಂಪನಿಯ ಹೆಸರನ್ನು ಇಮೇಲ್ ಕಳುಹಿಸುತ್ತಿದ್ದಂತೆ ಸಂಸ್ಥೆಯ ಕೆಲಸ, ಸಂಪೂರ್ಣ ಸರ್ಕಾರಿ ದಾಖಲೆ ಹಾಗೂ ಸಂಸ್ಥೆಯ ಇರುವಿಕೆ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಸೇವೆಗೆ ನಯಾ ಪೈಸೆ ಹಣವನ್ನು ವ್ಯಯಿಸಬೇಕಿಲ್ಲ.

**ಸುಳ್ಳು ಅನುಭವಸ್ಥರಿಗೆ ಇನ್ನು ಕಾಲವಿಲ್ಲ**

ರಿಝೋರ್ಸ್ ರಿಸರ್ಚ್ ಫೌಂಡೇಶನ್‌ನ ಸಿಇಒ ನರೇಂದ್ರ ಕೆ.ಪಿ. ಹೇಳುವ ಪ್ರಕಾರ, ಭಾರತದಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ಮಾತ್ರ ಇಂತಹ ಅಕ್ರಮಗಳ ಮೊರೆ ಹೋಗುತ್ತಿಲ್ಲ. ಕೆಲ ಪಾಶ್ಚಾತ್ಯ ದೇಶಗಳಿಗೆ ಉದ್ಯೋಗಿಕ ವೀಸಾ ಪಡೆಯಲು ಕನಿಷ್ಠ ಕಾರ್ಯಾನುಭವ ಹಾಗೂ ಸಂಬಳವನ್ನು ಕೇಳುತ್ತಾರೆ. ಈ ಉದ್ದೇಶಕ್ಕಾಗಿಯೂ ಸುಳ್ಳು ಪ್ರಮಾಣಪತ್ರ ನೀಡುವ ಜಾಲ ಭಾರತದಲ್ಲಿದೆ.

**ಸರ್ಕಾರಿ ನೇಮಕಕ್ಕೂ ಬಳಸಬಹುದು!**

ಸರ್ಕಾರಿ ಕೆಲಸಗಳಿಗೆ ನಡೆಯುವ ನೇಮಕ ಪ್ರಕ್ರಿಯೆಯಲ್ಲಿ ಇಂತಹ ಅಕ್ರಮಗಳು ನಡೆಯುತ್ತಿವೆ ಎಂಬ ಆರೋಪಗಳಿವೆ. ಈ ವೆಬ್‌ಸೈಟ್ ಮೂಲಕ ಯಾವುದೇ ಅಭ್ಯರ್ಥಿಯ ಕಾರ್ಯಾನುಭವದ ಪೈಕಿ ಇತಿಹಾಸ ತಿಳಿಯಬಹುದು. ಕೆಪಿಎಸ್‌ಸಿಯಲ್ಲಿನ ಸಾಕಷ್ಟು ಅಕ್ರಮಗಳನ್ನು ಹೊರತೆಗೆಯಲು ಇದು ನೆರವಾಗಬಹುದು.

"ನಮ್ಮದು ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ. ಸಾಮಾನ್ಯವಾಗಿ ಕೆಲಸದ ಅನುಭವ ಇರುವವರನ್ನೇ ನೇಮಕ ಮಾಡಿಕೊಳ್ಳುತ್ತೇವೆ. ಸುಳ್ಳು ಪ್ರಮಾಣಪತ್ರ ಇರಿಸಿಕೊಂಡು ಕೆಲಸ ಕೇಳಲು ಪ್ರತಿ ನೇಮಕದ ಸಂದರ್ಭದಲ್ಲಿಯೂ ಬರುತ್ತಾರೆ. ರಿಝೋರ್ಸ್‌ನಂತಹ ಸಂಸ್ಥೆಯಿಂದ ಅಲ್ಪಮಟ್ಟಿಗೆ ಸಹಾಯವಾಗುತ್ತದೆ. ಆದರೆ ಸುಳ್ಳು ಪ್ರಮಾಣಪತ್ರ ನೀಡುವ ಕಂಪನಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಿದೆ."

■ ಎನ್.ಎಸ್.ದ್ವಾರಕನಾಥ್, ಆಕ್ಸೋ ನೋಬೆಲ್ ಇಂಡಿಯಾ ಲಿಮಿಟೆಡ್ ಎಚ್‌ಆರ್ ಮುಖ್ಯಸ್ಥ

"ನಾವು ಪ್ರತಿ ವರ್ಷ ಸುಳ್ಳು ಪ್ರಮಾಣಪತ್ರ ನೀಡುವ 500ಕ್ಕೂ ಅಧಿಕ ಅಭ್ಯರ್ಥಿಗಳನ್ನು ನೋಡುತ್ತಿದ್ದೇವೆ. ಕೆಲ ಹುದ್ದೆಗಳಿಗೆ ಅನುಭವ ಕೇಳುವುದು ಹೌದು. ಆದರೆ ಸುಳ್ಳು ಪ್ರಮಾಣಪತ್ರ ನೀಡುವುದರಿಂದ ಸಂಪೂರ್ಣ ಔದ್ಯೋಗಿಕ ಅವಕಾಶವನ್ನೇ ಅಭ್ಯರ್ಥಿಗಳು ಹಾಳುಮಾಡಿಕೊಳ್ಳುತ್ತಾರೆ."

■ ನಂದಿನಿ, ಎಂಎಂಎಸ್ ಎಚ್ ಕ್ಲಿನಿಕಲ್ ರಿಸರ್ಚ್ ಎಚ್‌ಆರ್ ಮುಖ್ಯಸ್ಥೆ

**ಅಂತರ್ಜಾಲದ ವಿವರ**

ಈ ವೆಬ್‌ಸೈಟ್‌ಗೆ ಭೇಟಿ ನೀಡಿ ಯಾವುದೇ ಸಾರ್ವಜನಿಕರು ಅಥವಾ ಸಂಸ್ಥೆಗಳು ಮಾಹಿತಿ ಪಡೆಯಬಹುದು.
www.rezorce.com
RezorceRedData@rezorce.com